ಕರ್ನಾಟಕ ಸರಕಾರ

# ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ

ಆನಂದರಾವ್ ವೃತ್ತ, ಬೆಂಗಳೂರು–560009

ಸಂ: ಆಡಳಿತ/184/2016–17 ದಿನಾಂಕ:08.05.2017.

**ಮಾರ್ಗಸೂಚಿ –1**

ವಿಷಯ:– 2017–18ನೇ ಸಾಲಿನ ವರ್ಗಾವಣೆಯನ್ನು ಪಾರದರ್ಶಕತೆಯಿಂದ ಕೌನ್ಸಿಲಿಂಗ್ ಮೂಲಕ ನಡೆಸುವ ಬಗ್ಗೆ.

ಉಲ್ಲೇಖ:–
1. ಸರ್ಕಾರದ ಪತ್ರ ಸಂಖ್ಯೆ: ಸಿ.ಆ.ಸು.ಇ 12 ಸೇನೌವ 2017, ಬೆಂಗಳೂರು, ದಿನಾಂಕ: 03.05.2017.
2. ಸರ್ಕಾರದ ಪತ್ರ ಸಂಖ್ಯೆ: ಆಕುಕ 150 ಹೆಚ್.ಎಸ್.ಹೆಚ್ 2017, ದಿನಾಂಕ: 06.05.2017.
3. ಈ ನಿರ್ದೇಶನಾಲಯದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ:ಆಡಳಿತ/184/2016–17, ದಿನಾಂಕ: 08.05.2017.

*–*–*–*–*

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ದಿನಾಂಕ: 08.05.2017 ರ ಅಧಿಕೃತ ಜ್ಞಾಪನ ಪತ್ರದಲ್ಲಿ ವಿವರಿಸಿರುವ ಅಂಶಗಳಿಗೆ ಈ ಕೆಳಕಂಡಂತೆ ಕ್ರಮ ವಹಿಸಲು ಸೂಚಿಸಿದೆ.

1. ವರ್ಗಾವಣೆ ಕೋರಿಕೆಯ ಅರ್ಜಿಯನ್ನು ದಿನಾಂಕ: 09.05.2017 ರಿಂದ ಸ್ವೀಕರಿಸಿದ ದಿನದಂದೇ ಅಪ್‌ಲೋಡ್ ಮಾಡುವುದು ತಪ್ಪಿದಲ್ಲಿ ಕಡ್ಡಾಯವಾಗಿ ಮರುದಿನ ಅಂದರೆ ದಿನಾಂಕ: 10.05.2017 ರಂದು ಮಾಡುವುದು. ಅದೇ ಪ್ರಕ್ರಿಯೇಯನ್ನು ಅರ್ಜಿಯ ಅಪ್‌ಲೋಡ್ ಮಾಡುವ ಅಂತಿಮ ದಿನಾಂಕದ ವರೆಗೂ ಮುಂದುವರೆಸುವುದು.

   ಅ. ಅಧಿಕೃತ ಜ್ಞಾಪನಾ ಪತ್ರದಲ್ಲಿ ತಿಳಿಸಿರುವಂತೆ ಅಂತಿಮ ದಿನಾಂಕ: 15.05.2017ರ ಒಳಗಾಗಿ ಅಪ್‌ಲೋಡ್ ಮಾಡಲು ಜಿಲ್ಲೆಯಲ್ಲಿನ ಹಾಗೂ ತಾಲ್ಲೂಕುಗಳಲ್ಲಿನ ಲಭ್ಯವಿರುವ ಎಲ್ಲಾ ಡೇಟಾ ಎಂಟ್ರಿ ಆಪರೇಟರ್‌ಗಳನ್ನು ಬಳಸಿಕೊಳ್ಳತಕ್ಕದು.

   ಆ. ಎಲ್ಲಾ ಅರ್ಜಿಗಳನ್ನು ಅಪ್‌ಲೋಡ್ ಮಾಡಿದ ನಂತರ ಪರಿಶೀಲನೆಗಾಗಿ ರಾಜ್ಯದಲ್ಲಿನ ಜಿಲ್ಲೆಯಲ್ಲಿರುವ ನಿಗದಿತ ಡಿ.ಹೆಚ್.ಒ/ಡಿ.ಎಸ್ ರವರ ಹಂತದಲ್ಲಿ ಸಹಾಯಕ ಆಡಳಿತಾಧಿಕಾರಿಗಳು/ತಾಲ್ಲೂಕು ಮಟ್ಟದ ಸಿಬ್ಬಂದಿಗಳನ್ನು ಒಳಗೊಂಡಂತೆ ತಂಡಗಳನ್ನು ರಚಿಸುವುದು. ಸದರಿ ತಂಡಕ್ಕೆ ಎ.ಎ.ಒ ಗಳನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸುವುದು

2. ಜಿಲ್ಲಾ ಮಟ್ಟದ ಹಂತದಲ್ಲಿ ಪರಿಶೀಲನೆಯ ನಂತರ ನಿರ್ದೇಶನಾಲಯದಲ್ಲಿ ಪರಿಶೀಲನೆಗಾಗಿ ಈ ಕೆಳಕಂಡ ತಂಡಗಳನ್ನು ರಚಿಸಿದೆ.
   1. ಎಲ್ಲಾ ವಿಭಾಗಗಳ ಆಡಳಿತಾಧಿಕಾರಿಗಳು (ಸಾರಿಗೆ,ಕು.ಕ, ಸಾಮಾನ್ಯ)
   2. ಕಛೇರಿ ಅಧೀಕ್ಷಕರು.
   3. ಸಂಬಂಧಪಟ್ಟ ವಿಷಯ ನಿರ್ವಾಹಕರು.
   4. ಕಂಪ್ಯೂಟರ್ ಆಪರೇಟರ್.

3. ಮೇಲ್ಕಂಡ ಸಮಿತಿಯು ವರ್ಗಾವಣೆ ಅರ್ಜಿಯನ್ನು ನಿಗದಿತ ಸಮಯದೊಳಗೆ ಪರಿಶೀಲಿಸುವುದು.
4. ವರ್ಗಾವಣೆ ಪಟ್ಟಿಗೆ ಆಕ್ಷೇಪಣೆಯನ್ನು ನಿರ್ದೇಶನಾಲಯದ ಮೇಲ್ಕಂಡ ತಂಡಗಳು ನಿಗದಿತ ಸಮಯದಲ್ಲಿ ಪರಿಶೀಲಿಸುವುದು.

8.5.17

ಆಯುಕ್ತರು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಬೆಂಗಳೂರು.